**Crl.Misc No.**437/ 2023

**PW** :1

**ದಿನಾಂಕಃ 17-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಎದುರುದಾರರ ಪರವಾಗಿಃ ಶ್ರೀ ಎಮ್.ಎನ್.ಆರ್. ವಕೀಲರಿಂದಃ</u>**

1. ನಾನು ಬಿ.ಎಸ್.ಸಿ., ಬಿ.ಎಡ್. ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆ-ತಾಯಿಗೆ ನಾವು ಮೂರು ಜನ ಮಕ್ಕಳು. ನನ್ನ ತಾಯಿಗೆ ಈಗ 67 ವರ್ಷ ವಯಸ್ಸಾಗಿದೆ. ನನ್ನ ತಾಯಿ ನನ್ನೊಂದಿಗೆ ವಾಸವಿದ್ದಾರೆ ಎಂದರೆ ಸರಿಯಲ್ಲ. ನನಗೆ ಎರಡು ಜನ ಸಹೋದರರು ಇದ್ದು, ಸಹೋದರಿಯರು ಇರುವುದಿಲ್ಲ. ನನ್ನ ಸಹೋದರರ ಪೈಕಿ ಒಬ್ಬರಿಗೇ ಮದುವೆಯಾಗಿದ್ದು, ಇನ್ನೊಬ್ಬರಿಗೆ ಮದುವೆಯಾಗಿರುವುದಿಲ್ಲ. ಮದುವೆಯಾಗದೇ ಇರುವ ನನ್ನ ಸಹೋದರ ನನ್ನ ಜೊತೆ ವಾಸವಿದ್ದಾರೆ ಎಂದರೆ ಸರಿಯಲ್ಲ.

2. ನಿಪಿ.1 ನನ್ನ ಮತ್ತು ಎದುರುದಾರರ ವಿವಾಹದ ಆಮಂತ್ರಣ ಪತ್ರಿಕೆ ಅಲ್ಲ. ಸಾಕ್ಷಿಯು ಮುಂದುವರೆದು ನನ್ನ ಮತ್ತು ಎದುರುದಾರರ ವಿವಾಹದ ಆಮಂತ್ರಣ ಪತ್ರಿಕೆಯನ್ನು ನಾನು ನನ್ನ ವಕೀಲರಿಗೆ ಕೊಟ್ಟಿದ್ದು, ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಬಲ್ಲೇ ಎಂದು ಸ್ವತಃ ನುಡಿದಿರುತ್ತಾರೆ. ನನ್ನ ಮಗಳ ಹೆಸರು ಜ್ಞಾನವಿ. ಸಾಕ್ಷಿಯು ಮುಂದುವರೆದು ನಾಮಕರಣ ಮಾಡಿದಾಗ ಮೂರನೇ ಅರ್ಜಿದಾರರ ಹೆಸರು ಜ್ಞಾಪಿಕಾ ಎಂದು ಇಟ್ಟಿದ್ದು, ನಂತರದಲ್ಲಿ ಮೂರನೇ ಅರ್ಜಿದಾರರ ಹೆಸರು ಜ್ಞಾನವಿ ಎಂದು ಮಾಡಿರುತ್ತೇವೆ.

3. ನಿಪಿ.8 ರ ದಾಖಲೆಯಲ್ಲಿ ಆಂಗ್ಲ ಭಾಷೆಯ "ಎಸ್"ಎನ್ನುವ ಅಕ್ಷರವನ್ನು ತಿದ್ದಿ, ಆಂಗ್ಲ ಭಾಷೆಯ "ಜೆ" ಅನ್ನುವ ಅಕ್ಷರವನ್ನು ಹಾಕಿ ನಾನೇ ನಿಪಿ.8 ರ ದಾಖಲೆಯಲ್ಲಿ ಜ್ಞಾಪಿಕಾ ಎಂದು ತಿದ್ದುಪಡಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಅರ್ಜಿಯಲ್ಲಿ 3 ನೇ ಅರ್ಜದಾರರ ಹೆಸರು ಜ್ಞಾನವಿ ಅಲಿಯಾಸ್ ಜ್ಞಾಪಿಕಾ ಎಂದು ನಮೂದಿಸಿರುವುದಿಲ್ಲ.

4. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ಪತ್ರವನ್ನು ಯಾರು ಬರೆದಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸದರಿ ಪತ್ರವನ್ನು ತಾನೇ ಸ್ವತಃ ತನ್ನ

ಬರವಣಿಗೆಯಲ್ಲಿ ಬರೆದಿರುವುದಾಗಿ ಹೇಳಿದ್ದು, ಸದರಿ ದಾಖಲೆಯನ್ನು ನಿ.ಆರ್.1 ಎಂದು ಗುರುತಿಸಲಾಯಿತು. ನಿ.ಆರ್.1 ರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ.ಆರ್.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಎದುರುದಾರರು ನನ್ನೊಂದಿಗೆ ಜಗಳ ಮಾಡಿ ನನಗೆ ಹೊಡೆದು-ಬಡೆದು ನನ್ನ ಮೊಬೈಲ್‌ನ್ನು ಒಡೆದು ಹಾಕಿ ನಿ.ಆರ್.1 ರ ದಾಖಲೆಯನ್ನು ಎದುರುದಾರ ನನ್ನಿಂದ ಬರೆಸಿಕೊಂಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ಎದುರುದಾರನು ನನಗೆ ಹೊಡೆ-ಬಡೆ ಮಾಡಿ ಒತ್ತಾಯದಿಂದ ನಿ.ಆರ್.1 ರ ದಾಖಲೆಯನ್ನು ಬರೆಸಿಕೊಂಡಿರುತ್ತಾರೆ ಎಂದು ಹೇಳಿ ನಾನು ಎದುರುದಾರನ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ.

5. ಎದುರುದಾರರು ಸಾರಾಯಿ ಕುಡಿದು ಬಂದು ನನಗೆ ಹೊಡೆ-ಬಡೆ ಮಾಡಿ ಹಿಂಸೆ ಕೊಡುತ್ತಾರೆ ಎಂದು ನಾನು ಇಲ್ಲಿಯವರೆಗೂ ಎದುರುದಾರರ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ. ಎದುರುದಾರರು ಸಾರಾಯಿ ಕುಡಿದು ಬಂದು ನನಗೆ ಹೊಡೆ-ಬಡೆ ಮಾಡಿ ಹಿಂಸೆ ನೀಡಿದ್ದೇ ಆದರೆ ನಾನು ಎದುರುದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತಿದ್ದೆ ಹಾಗೂ ಎದುರುದಾರರಿಗೆ ಯಾವುದೇ ಮಧ್ಯಪಾನದ ಹವ್ಯಾಸ ಇಲ್ಲದಿದ್ದ ಕಾರಣ ಮತ್ತು ಎದುರುದಾರ ನನಗೆ ಯಾವುದೇ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡದಿದ್ದ ಕಾರಣ ನಾನು ಎದುರುದಾರನ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎದುರುದಾರ ಬಂದು ಜಗಳ ಮಾಡಿದ ಕಾರಣ ನಾನು ಹಾಸನದ ಮಹಿಳಾ ಪೋಲೀಸ್ ಠಾಣೆಗೆ ದೂರನ್ನು ದಾಖಲಿಸಿರುತ್ತೇನೆ ಎಂದು ಸ್ವತಃ ನುಡಿದಿರುತ್ತಾರೆ.

**ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**

ನ್ಯಾಯಾಧೀಶರು ಕೆ.ಆರ್.ನಗರ